ದಿನಾಂಕ: 06.03.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಖ್ಯ ವಿಚಾರಣೆ: ಶ್ರೀ.ಎಎ ವಕೀಲರಿಂದ ಎದುರುದಾರರ ಪರವಾಗಿ.

ನನ್ನ ಮುಖ್ಯವಿಚಾರಣೆಯಾಗಿ ಹಾಜರುಪಡಿಸಿರುವ ಪ್ರಮಾಣಪತ್ರದಲ್ಲಿ ಬರೆಯಲಾಗಿರುವ ಅಂಶಗಳು ನನಗೆ ತಿಳಿದಿದ್ದು ಸತ್ಯಾಂಶಗಳಿಂದ ಕೂಡಿರುತ್ತವೆ.

ಎದುರುದಾರರ ಪರವಾಗಿ ಹಾಜರಾಗಿ ಸಾಕ್ಷ್ಯ ನುಡಿಯಲು ನನಗೆ ಕೊಟ್ಟಿರುವ ಅಧಿಕಾರ ಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಆರ್.16 ಎಂದೂ, ಪೋಲೀಸಿನವರಿಗೆ ಕೊಟ್ಟಿರುವ ದೂರಿನ ದೃಡೀಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಆರ್-17 ಎಂದು ಗುರುತಿಸಲಾಯಿತು.

ಪಾಟೀಸವಾಲು: ಶ್ರೀ.ಬಿವೈಆರ್ ವಕೀಲರಿಂದ ಅರ್ಜಿದಾರರ ಪರವಾಗಿ.

ಅಪಘಾತವಾದ ಸ್ಥಳದಲ್ಲಿ ಪೋಲೀಸ್ ಸಿಬ್ಬಂದಿಯವರು ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಅಪಘಾತವಾದ ನಂತರ ಅಲ್ಲಿಗೆ ಬಂದಿರುತ್ತಾರೆ ಎಂದು ನುಡಿದಿರುತ್ತಾರೆ. ಅಪಘಾತವಾದ ದಿನ ಪೋಲೀಸಿನವರು ನಮ್ಮ ಬಸ್ಸನ್ನು ಅಮಾನತುಪಡಿಸಿಕೊಂಡಿದ್ದರು ಎಂದರೆ ಸರಿ. ನಾನು ಪೋಲೀಸಿನವರ ಮುಂದೆ ಕೊಟ್ಟಿರುವ ಹೇಳಿಕೆಯಲ್ಲಿ ಮುಂದೆ ಹೋಗುತ್ತಿದ್ದಂತಹ ದ್ವಿಚಕ್ರ ವಾಹನಕ್ಕೆ ನಾನು ಚಲಾಯಿಸುತ್ತಿದ್ದಂತಹ ಬಸ್ಸು ಹೋಗಿ ಡಿಕ್ಕಿಹೊಡೆದಿರುತ್ತದೆ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಪ್ರಕರಣದಲ್ಲಿ ನಾನು ಪೋಲೀಸ್ ಠಾಣೆಗೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದ ಏಳು ದಿನಗಳ ನಂತರ ನಿಆರ್-17ರಂತಿರುವ ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ಅಪಘಾತವಾದ ದಿನವೇ ದೂರನ್ನು ಕೊಡಲು ಏನು ತೊಂದರೆ ಇರುವುದಿಲ್ಲ ಎಂದರೆ ಆ ದಿನ ನನಗೆ ದೂರನ್ನು ಕೊಡಲು ನನಗೆ ಗೊತ್ತಾಗಿರುವುದಿಲ್ಲ. ಪ್ರಕರಣದಲ್ಲಿ ತನಿಖೆ ಪೂರ್ಣಗೊಳಿಸಿದ ನಂತರ ತನಿಖಾಧಿಕಾರಿಗಳು ನನ್ನ ವಿರುದ್ಧ ದೋಷರೋಪಣ ಪಟ್ಟಿ ಸಲ್ಲಿಸಲಾಗಿರುತ್ತದೆ ಎಂದರೆ ಸರಿ. ನನ್ನ ಪ್ರಮೋಷನ್‌ಗೆ ತೊಂದರೆ ಆಗುತ್ತದೆ ಎಂದು ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಒ ಹೇ ಕೇ ಸ ಇದೆ

15ನೇ ಅಪರ ನ್ಯಾಯಾಧೀಶರು
ಮತ್ತು ಎಂಎಸಿಟಿ